Together we
# GROW

वसुधैव कुटुम्बकम्

REPORT 2016-18

ವರದಿ 2016-18

**SEVA BHARATHI (R),** MANGALORE

**ಸೇವಾ ಭಾರತಿ (ರಿ),** ಮಂಗಳೂರು

# Seva Bharathi (R), Mangalore


| | | | |
|---|---|---|---|
| President | : | **Smt. Sumathi Shenoy** | Home Maker |
| Secretary | : | **Shri H Nagaraj Bhat** | Retd. Bank Executive (7760905604) |
| Treasurer | : | **Shri P Vinod Shenoy** | Entrepreneur (9880543918) |
| Spokes person | : | **Dr. U V Shenoy** | Retd. Prof. of Paediatrics (9845047785) |
| Trustees | : | **Dr. Amitesh Narayan** | Prof. of Physiotherapy |
| | | **Smt. Prameela Rao** | Prof. in First Grade College |
| | | **Shri Gajanana Pai** | Mech. Engineer |
| | | **Dr. Satheesh Rao** | Prof. of Psychiatry |
| | | **Dr. K R Kamath** | Prof. of Orthopaedics |
| | | **Shri Mukund Kamath** | Entrepreneur |
| | | **Shri B Ashwathama Rao** | Medical Professional |


# Bank Details for contributions, through NEFT/RTGS

| Sl.No. | Unit | Bank | Branch | Account No. | IFSC code |
|---|---|---|---|---|---|
| 1 | Seva Bharathi (R) Mangalore | Corporation Bank | Car Street Mangaluru | 520101000346981 | CORP0000003 |
| 2 | Chetana Child Development Centre | Corporation Bank | Car Street Mangaluru | 520101000330260 | CORP0000003 |
| 3 | Roman and Catherine Lobo Residential School for visually Impaired | Canara Bank | Gandhinagar Mangaluru | 0631101133277 | CNRB0000631 |
| 4 | Navachetana Communication Development Centre | Corporation Bank | Car Street Mangaluru | 520101000359031 | CORP0000003 |

Financial assistance to any other units of Seva Bharathi (except those mentioned at Sl.No. 2,3 & 4 above) may be credited to the account indicated at sl.no.1 above.

Dear Donors/Well wishers,
Season's Greetings to all.

It gives us immense pleasure to present a biennial report of Seva Bharathi (R), Mangalore. Ours is a non-governmental organization, formed in the year 1991 by a group of service-minded homemakers and doctors serving the society with the support of the public. Operating from a humble beginning, Seva Bharathi presently runs a number of service units.

During the period under report, one of its units, viz.: Chetana Child Development Centre (CCDC), from the State Award as "Best Institution in the services of disabled people" awarded by Governament of Karnataka. CCDC also celebrated 2017-18 as the Silver Jubilee Year. The District Administration of Dakshina Kannada district, recognising the services of Seva Bharathi, entrusted the responsibilities of looking after Endosulphan Victims' Day Care Centres, from April 2017. Another Day Care unit for Divyang, viz.: 'Adamya Chetana' opened at Ullal, at the outskirts of Mangaluru in February 2018.

Our donors, well-wishers, government/semi-government bodies and private enterprises strongly supported us in our mission. On behalf of Seva Bharathi (R) Mangaluru and all those associated with its various units and activities, we take this opportunity to convey our heartfelt thanks to them. We solicit your continued support in the days to come.

Our special thanks to Tarjani Communications Pvt. Ltd. and Prakash Offset Printers who have always helped us in reaching you.

**President and Trustees,**
Seva Bharathi (R), Mangalore

---

# Chetana Child Development Centre (CCDC)

**Service :** A Day Care centre to provide health care and general education for all types of divyang children, except visually impaired, deaf & dumb.

## Functions

- Works on all week days, except saturdays and sundays, like a normal school with classes based on severity of disability.
- Brings the children from their residences and drops them back, by school bus.
- Day begins with a prayer song "Chetana Chetana..." scripted by visualising the dream of special child and ends with the national anthem.
- Provides required treatment, i.e: physiotherapy, speech therapy, occupation therapy and homeopathic medication.
- Imparts general teaching and coaching. Scope is given for sports & games, art, music, dance and skating.
- Provides mid-day meal through Akshaya Patra.



ಆತ್ಮೀಯ ದಾನಿಗಳೇ ಹಾಗೂ ಹಿತೈಷಿಗಳೇ,
ಸಪ್ರೇಮ ವಂದನೆಗಳು, ಶುಭಾಶಯಗಳು.

ಸೇವಾಭಾರತಿ (ರಿ) ಮಂಗಳೂರು ಇದರ ದ್ವೈವಾರ್ಷಿಕ ವರದಿಯನ್ನು ತಮ್ಮ ಮುಂದಿಡಲು ಹರ್ಷಪಡುತ್ತೇವೆ. ಸೇವಾ ಮನೋಭಾವದ ಮಂಗಳೂರಿನ ಕೆಲವು ಗೃಹಿಣಿಯರು ಮತ್ತು ವೈದ್ಯರು 1991ರಲ್ಲಿ ಸಾರ್ವಜನಿಕರ ಸಹಯೋಗದಿಂದ ಸಮಾಜದ ಸೇವಾಲಕ್ಷ್ಯವನ್ನು ಇಟ್ಟುಕೊಂಡು ಸ್ಥಾಪಿಸಿರುವ ಸರಕಾರೇತರ ಸಂಸ್ಥೆ ಸೇವಾಭಾರತಿ (ರಿ) ಮಂಗಳೂರು. ಒಂದು ಪುಟ್ಟ ಕೋಣೆಯಲ್ಲಿ ಆರಂಭವಾದ ಸೇವಾಭಾರತಿಯು ಇಂದು ಸೇವಾಘಟಕಗಳ ಸಮೂಹವನ್ನು ಮುನ್ನಡೆಸುತ್ತಿದೆ.

ಈ ವರದಿಯ ಅವಧಿಯಲ್ಲಿ, ಚೇತನಾ ಬಾಲ ವಿಕಾಸ ಕೇಂದ್ರವು "ದಿವ್ಯಾಂಗರ ಸೇವೆ ಮಾಡುತ್ತಿರುವ ಉತ್ತಮ ಸಂಸ್ಥೆ" ಎಂಬುದಾಗಿ ಕರ್ನಾಟಕ ಸರ್ಕಾರದ ಪ್ರಶಸ್ತಿಗೆ ಭಾಜನವಾಗಿದೆ. ಚೇತನಾ ಸಂಸ್ಥೆಯು 2017-18ರಲ್ಲಿ ತನ್ನ ರಜತ ವರ್ಷವನ್ನು ಆಚರಿಸಿತು. ಸೇವಾಭಾರತಿಯ ಸೇವಾ ಬದ್ಧತೆಯನ್ನು ಗಮನಿಸಿ ದ.ಕ. ಜಿಲ್ಲಾಡಳಿತವು ಎಂಡೋಸಲ್ಫಾನ್ ಸಂತ್ರಸ್ಥರ ಹಗಲು ಪಾಲನಾ ಕೇಂದ್ರಗಳನ್ನು ನಿರ್ವಹಿಸುವ ಹೊಣೆಯನ್ನು ಸೇವಾಭಾರತಿಗೆ ಎಪ್ರಿಲ್ 2017ರಿಂದ ವಹಿಸಿತು. ಮಂಗಳೂರು ನಗರದ ಹೊರವಲಯ ಉಳ್ಳಾಲದಲ್ಲಿ ದಿವ್ಯಾಂಗರಿಗಾಗಿ ಇನ್ನೊಂದು ಹಗಲು ಪಾಲನಾ ಕೇಂದ್ರ "ಅದಮ್ಯ ಚೇತನಾ" ಪ್ರಾರಂಭವಾಯಿತು. ಮೇಲಿನ ಅವಧಿಯಲ್ಲಿ, ದಾನಿಗಳು, ಹಿತೈಷಿಗಳು, ಸರಕಾರಿ, ಅರೆ ಸರಕಾರಿ ಹಾಗೂ ಖಾಸಗಿ ಉದ್ಯಮಗಳು ನಮ್ಮನ್ನು ಬಲವಾಗಿ ಬೆಂಬಲಿಸಿದುದರಿಂದ ನಮ್ಮ ಉದ್ದೇಶದ ಕಡೆಗೆ ಸಾಗುವುದು ಸಾಧ್ಯವಾಯಿತು. ನಮ್ಮ ಮೇಲಿರಿಸಿರುವ ಈ ವಿಶ್ವಾಸಕ್ಕಾಗಿ ಸೇವಾ ಭಾರತಿ (ರಿ) ಮಂಗಳೂರು ಮತ್ತು ಅದರ ಎಲ್ಲ ಘಟಕಗಳು ಹಾಗೂ ಅವುಗಳ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಎಲ್ಲರ ಪರವಾಗಿ ಹೃದಯಪೂರ್ವಕವಾಗಿ ಕೃತಜ್ಞತೆ ವ್ಯಕ್ತ ಪಡಿಸುತ್ತಿದ್ದೇವೆ. ಮುಂದಿನ ದಿನಗಳಲ್ಲಿಯೂ ತಾವು ನಮ್ಮೊಂದಿಗೆ ಸಹಕರಿಸುವರೆಂದು ಆಶಿಸುತ್ತೇವೆ.

ನಾವು ನಿಮ್ಮಲ್ಲಿಗೆ ತಲಪುವರೇ ಸಹಕರಿಸಿರುವ 'ತರ್ಜನಿ ಕಮ್ಯುನಿಕೇಷನ್ ಪ್ರೈ.ಲಿ.' ಹಾಗೂ 'ಪ್ರಕಾಶ್ ಆಫ್‌ಸೆಟ್ ಪ್ರಿಂಟರ್ಸ್' ಅವರಿಗೂ ನಾವು ತುಂಬಾ ಆಭಾರಿ.

**ಅಧ್ಯಕ್ಷರು ಮತ್ತು ವಿಶ್ವಸ್ಥರು,**
ಸೇವಾಭಾರತಿ (ರಿ) ಮಂಗಳೂರು

---

# ಚೇತನಾ ಬಾಲ ವಿಕಾಸ ಕೇಂದ್ರ

## ಸೇವೆ

ಕಿವುಡ ಮತ್ತು ಮೂಕ, ದೃಷ್ಟಿಮಾಂದ್ಯತೆ ಹೊರತುಪಡಿಸಿ, ಎಲ್ಲಾ ಬಗೆಯ ಅಂಗವೈಕಲ್ಯವಿರುವ ದಿವ್ಯಾಂಗರ ಆರೋಗ್ಯ ಶಿಕ್ಷಣ ಮತ್ತು ಸಾಮಾನ್ಯ ಶಿಕ್ಷಣ ಕೊಡುವ ಹಗಲು ಪಾಲನಾ ಕೇಂದ್ರ.

## ಚಟುವಟಿಕೆ

- ಶನಿವಾರ ಮತ್ತು ರವಿವಾರ ಹೊರತುಪಡಿಸಿ, ವಾರದ ಎಲ್ಲಾ ದಿನಗಳಲ್ಲಿಯೂ, ವೈಕಲ್ಯಗಳಿಗನುಸಾರವಾಗಿ ತರಗತಿಗಳ ಆಧಾರದಲ್ಲಿ ಸಾಮಾನ್ಯ ಶಾಲೆಯ ತರಹ ಕಾರ್ಯಾಚರಿಸುತ್ತದೆ.
- ಮಕ್ಕಳನ್ನು ಅವರವರ ಮನೆಗಳಿಂದ ಸಂಸ್ಥೆಯ ವಾಹನದಲ್ಲಿ ಕರೆತಂದು ಸಂಜೆ ವಾಪಸ್ಸು ಮನೆಗೆ ಬಿಡುವುದು.
- ವಿಶೇಷ ಮಕ್ಕಳ ಕನಸನ್ನು ಆಧರಿಸಿ ರಚಿಸಿದ "ಚೇತನಾ ಚೇತನಾ....." ಪ್ರಾರ್ಥನೆಯೊಂದಿಗೆ ಶಾಲೆ ಆರಂಭವಾಗಿ, ರಾಷ್ಟ್ರಗೀತೆಯೊಂದಿಗೆ ಮುಕ್ತಾಯವಾಗುತ್ತದೆ.
- ಅವಶ್ಯವಿರುವ ಚಿಕಿತ್ಸೆ ಅಂದರೆ ಫಿಸಿಯೋಥೆರಪಿ, ಸ್ಪೀಚ್ ಥೆರಪಿ, ಆಕ್ಯುಪೇಷನ್ ಥೆರಪಿ, ಹೋಮಿಯೋಪತಿ ಚಿಕಿತ್ಸೆ ಕೊಡಲಾಗುತ್ತದೆ.
- ಸಾಮಾನ್ಯ ಶಿಕ್ಷಣದ ಜೊತೆಗೆ ಆಟೋಟಗಳು, ಚಿತ್ರಕಲೆ, ಸಂಗೀತ, ನೃತ್ಯ, ಸ್ಕೇಟಿಂಗ್ ಕೂಡಾ ಕಲಿಸಲಾಗುತ್ತಿದೆ.
- ಮಧ್ಯಾಹ್ನ "ಅಕ್ಷಯ ಪಾತ್ರೆ"ಯ ಊಟವಿದೆ.
- ಅತ್ಯಲ್ಪ ಶುಲ್ಕ, ಅದೂ ಸ್ವ ಇಚ್ಛೆ ಇದ್ದಲ್ಲಿ ಮಾತ್ರ, ಪಡೆಯಲಾಗುತ್ತದೆ.
- ಸ್ವಾತಂತ್ರ್ಯ ದಿನ, ಪ್ರಜಾಪ್ರಭುತ್ವ ದಿನ, ಶ್ರೀ ಕೃಷ್ಣ ಜನ್ಮಾಷ್ಟಮಿ, ಶಿಕ್ಷಕರ ದಿನ, ಆಯುಧ ಪೂಜೆ, ರಕ್ಷಾ ಬಂಧನ, ದೀಪಾವಳಿ, ಕ್ರಿಸ್‌ಮಸ್, ಹೊಸವರ್ಷ ಆಚರಣೆ, ಸಾಮೂಹಿಕ ಹುಟ್ಟುಹಬ್ಬ ಆಚರಣೆ ನಡೆಸಲಾಗುತ್ತದೆ.

## ಸಾಧನೆ

- ಚೇತನಾವು "ದಿವ್ಯಾಂಗರ ಸೇವೆ ಮಾಡುತ್ತಿರುವ ಉತ್ತಮ ಸಂಸ್ಥೆ" ಎಂಬ ಕರ್ನಾಟಕ ಸರ್ಕಾರದ ಪ್ರಶಸ್ತಿಯನ್ನು ವಿಶ್ವ ಅಂಗವಿಕಲರ ದಿನ 03.12.2016ರಂದು ಟ್ರೋಫಿ ಮತ್ತು ನಗದು ಬಹುಮಾನದೊಂದಿಗೆ ಪಡೆದಿದೆ.
- ಚೇತನಾ ಶಾಲೆಯು 12.02.2018ರಂದು ತನ್ನ ಬೆಳ್ಳಿ ಹಬ್ಬವನ್ನು, ತನ್ನ ಬೆಳವಣಿಗೆಗೆ ಸಹಕರಿಸಿದ ಎಲ್ಲರನ್ನೂ ಗೌರವಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಿದೆ.

- Nominal fee accepted on voluntary basis.
- Celebrates Independence Day, Republic Day, Teachers Day, Shri Krishna Janmasthami, Ayudha Pooja, Raksha Bandhan, Deepavali, Christmas/New Year Celeberation and Mass Birthday.



## Achievements

- CCDC has been adjudged as 'Best Institution in the services of disabled people' by Govt. of Karnataka and honoured with a trophy and cash award on World Disabled Day on 03.12.2016, at Bangaluru.
- CCDC celebrated Silver Jubilee year on 12.02.2018 in a meaningful manner by honouring those who supported its growth and functioning.





## ಫಿಸಿಯೋಥೆರಪಿ ಮತ್ತು ನ್ಯೂರೋ ಸೆನ್ಸರಿ ಚಿಕಿತ್ಸಾ ಘಟಕ



### ಸೇವೆ

ಫಿಸಿಯೋಥೆರಪಿ ಚಿಕಿತ್ಸೆ.

### ಚಟುವಟಿಕೆ

- ಚೇತನಾ ಫಲಾನುಭವಿಗಳಿಗೆ ಫಿಸಿಯೋಥೆರಪಿ ಚಿಕಿತ್ಸೆ ಉಚಿತವಾಗಿ ಕೊಡಲು ಚೇತನಾ ಶಾಲೆಯ ಒಳಗೇ ಸುಸಜ್ಜಿತ ಫಿಸಿಯೋಥೆರಪಿ ಘಟಕ.
- ಘಟಕವು, ಮ್ಯಾಗ್ನೆಟಿಕ್ ಥೆರಪಿ ಮತ್ತು ಉಗಿ ಚಿಕಿತ್ಸಾ ಯಂತ್ರ ಸಹಿತ ಫಿಸಿಯೋಥೆರಪಿಗೆ ಅವಶ್ಯವಿರುವ ಎಲ್ಲ ಉಪಕರಣಗಳನ್ನು ಹೊಂದಿರುತ್ತದೆ.
- ಮರಳು, ಹುಲ್ಲು, ನೀರು, ಜಲ್ಲಿಕಲ್ಲು ಮತ್ತು ನುಣುಪು ಕಲ್ಲುಗಳ ಮೇಲೆ ದಿವ್ಯಾಂಗ ಮಕ್ಕಳ ಸ್ಪರ್ಶ ಜ್ಞಾನದ ಆಧಾರದಲ್ಲಿ ಚಿಕಿತ್ಸೆ ಕೊಡುವಂತಹ ಅಪೂರ್ವ "ಸೆನ್ಸರಿ ಪಾರ್ಕ್" ಘಟಕದ ವಿಶೇಷ.
- ಸೆರೆಬ್ರಲ್ ಪಾಲ್ಸಿ, ಡಿಲೇಯ್ಡ್ ಮೈಲ್ ಸ್ಟೋನ್, ಡೌನ್ ಸಿಂಡ್ರೋಮ್, ಆಟಿಸಂ ಡಿಸಾರ್ಡರ್ ಇರುವ ವಿದ್ಯಾರ್ಥಿಗಳಿಗೆ ಚಿಕಿತ್ಸೆ ನೀಡಿ ಹೆತ್ತವರಿಗೆ ಸಲಹೆ ಕೊಡುವುದು.
- ತಜ್ಞರ ಶಿಫಾರಸ್ಸಿನೊಂದಿಗೆ, ಹೊರಗಿನಿಂದ ಬರುವ ದಿವ್ಯಾಂಗ ಮಕ್ಕಳಿಗೂ, ಅಲ್ಪ ಶುಲ್ಕ ಪಡೆದು, ಚಿಕಿತ್ಸೆ ಕೊಡುವುದು.

---

## ನ್ಯೂರೋ ಸೆನ್ಸರಿ ಡೆವೆಲಪ್‌ಮೆಂಟ್ ಥೆರಪಿ ಸಂಚಾರಿ ಘಟಕ

### ಸೇವೆ

ಸುಸಜ್ಜಿತ ಸಂಚಾರಿ ಫಿಸಿಯೋಥೆರಪಿ ಘಟಕ

### ಆವಶ್ಯಕತೆ

ಸುಧಾರಿತ ಫಿಸಿಯೋಥೆರಪಿ ಚಿಕಿತ್ಸಾ ವ್ಯವಸ್ಥೆ ಇಲ್ಲದಿರುವ ಗ್ರಾಮೀಣ ಪ್ರದೇಶಗಳಲ್ಲಿ ದಿವ್ಯಾಂಗರ ಮನೆ ಬಾಗಿಲಿಗೇ ಭೇಟಿ ಕೊಟ್ಟು, ಮಕ್ಕಳ ಎಳವೆಯಲ್ಲಿಯೇ ವೈಕಲ್ಯಗಳ ಪತ್ತೆ ಹಚ್ಚುವಿಕೆ, ಆವಶ್ಯಕ ಫಿಸಿಯೋಥೆರಪಿ ಮತ್ತು ಸ್ಪೀಚ್ ಥೆರಪಿ ಚಿಕಿತ್ಸೆ ಕೊಡುವುದು ಮತ್ತು ಅನುವರ್ತಿ ಕಾರ್ಯ ಕೈಗೊಳ್ಳುವುದು.




### ಚಟುವಟಿಕೆ

- ಮಂಗಳೂರಿನಿಂದ 56 ಕಿ.ಮೀ. ವ್ಯಾಪ್ತಿಯಲ್ಲಿರುವ ಬಿ.ಸಿ.ರೋಡ್, ಬಂಟ್ವಾಳ, ಪುತ್ತೂರು ಹಾಗೂ ಗುರುಪುರಕ್ಕೆ ವಾರಕ್ಕೆ ಒಂದು ಅಥವಾ ಎರಡು ಬಾರಿ ಹೋಗಿ ಫಿಸಿಯೋಥೆರಪಿ ಮತ್ತು ಸ್ಪೀಚ್ ಥೆರಪಿ ಚಿಕಿತ್ಸೆ ಕೊಡುವುದು.
- ಇದರ ಉಪಯುಕ್ತತೆಯನ್ನು ಹೆಚ್ಚಿಸಲು, ಸರ್ಕಾರದ ಯೋಜನೆಯಾದ ಸರ್ವ ಶಿಕ್ಷಣ ಅಭಿಯಾನದ ಸಹಕಾರದಿಂದ ಫಲಾನುಭವಿಗಳ ವ್ಯಾಪ್ತಿಕ್ಷೇತ್ರವನ್ನು ವಿಸ್ತರಿಸುವುದು.
- ಸೆರೆಬ್ರಲ್ ಪಾಲ್ಸಿ, ಡಿಲೇಯ್ಡ್ ಮೈಲ್ ಸ್ಟೋನ್, ಡೌನ್ ಸಿಂಡ್ರೋಮ್, ಆಟಿಸಂ ಡಿಸಾರ್ಡರ್ ಇರುವ ವಿದ್ಯಾರ್ಥಿಗಳಿಗೆ ಚಿಕಿತ್ಸೆ ನೀಡುವುದು.
- ಕಿರು ವಯಸ್ಸಿನಲ್ಲಿಯೇ ನ್ಯೂನತೆಯನ್ನು ಪತ್ತೆ ಹಚ್ಚುವಿಕೆಯಲ್ಲಿ ಶಿಕ್ಷಕರಿಗೆ ವರ್ಗಗಳನ್ನು ನಡೆಸುವುದು ಮತ್ತು ಹೆತ್ತವರಿಗೆ ಸಲಹೆ, ಸೂಚನೆ ಕೊಡುವುದು.

# Physiotherapy and Neuro - Sensory Treatment

## Service

Physiotherapy treatment.



## Functions

- It is a full-fledged in-house physiotherapy unit to treat the Chetana inmates, free of cost.
- The unit is self-sufficient having all physio equipments, including magnetic therapy and steam bath.
- The unit possesses a unique sensory park to provide treatment based on the child's sensing of sand, grass, water, boulders and stones.
- Treatment to the children with cerebral palsy, delayed milestone, Down syndrome and autism disorder is given, with guidelines to the parents.
- The unit attends cases from outside on prescription by authorised consultants, on nominal charges.

---

# Mobile Neuro - Sensory Development Therapy Unit

## Service

Providing physiotherapy in a fully-equipped mobile unit.

## Necessity

Early detection of disabilities, providing necessary physiotherapy and speech therapy & further follow up, at the door step at rural areas where physiotherapy advancement is not available.

## Functions

- Visits once/twice a week to BC Road, Bantwal, Puttur & Gurupur, covering 56 km from Mangaluru for physio/speech therapy treatment.
- The utility of the unit is widened with the co-operation of "Sarva Shikhshana Abhiyan" a government scheme, by mobilizing the needy.
- Treatment to the children with cerebral palsy, delayed milestone, Down Syndrome and autism disorder are given.
- Early interventional programs are conducted for teachers and guidelines are given to the parents.

## ವೃತ್ತಿಪರ ತರಬೇತಿ ಕೇಂದ್ರ

**ಸೇವೆ** : ಪ್ರೌಢ ದಿವ್ಯಾಂಗರ ಹಗಲು ಪಾಲನಾ ಕೇಂದ್ರ.

### ಆವಶ್ಯಕತೆ

ವಿಶೇಷ ಮಕ್ಕಳ ಶಾಲೆಯಲ್ಲಿ 25 ವರ್ಷ ವಯಸ್ಸು ದಾಟಿರುವ ಪ್ರೌಢ ದಿವ್ಯಾಂಗರಿಗೆ ಪ್ರವೇಶವಿಲ್ಲದಿರುವ ಕಾರಣ ಅವರಿಗೆ ಅವಕಾಶ ಕಲ್ಪಿಸುವುದು.



### ಚಟುವಟಿಕೆ

- ಕೈಚೀಲ, ಫ್ಯಾನ್ಸಿ ಬ್ಯಾಗ್, ಹೂ, ಸ್ಕ್ರೀನ್ ಪ್ರಿಂಟ್ ಮೊದಲಾದ ಕೆಲಸಗಳಲ್ಲಿ ಅವರ ಕೌಶಲ್ಯವನ್ನು ಬಳಸುವುದು.
- ಕಾರ್ಪೊರೇಟ್ ಸಂಸ್ಥೆಗಳು, ದೇವಸ್ಥಾನಗಳು, ಮದುವೆ ಪಾರ್ಟಿಗಳು, ಔಷಧಿ ಅಂಗಡಿಗಳು, ಕ್ಯಾಟರರ್‌ಗಳು ಮುಂತಾದವರಿಂದ ಘಟಕಕ್ಕೆ ಉತ್ತಮ ಬೆಂಬಲ ಸಿಗುತ್ತಿದೆ.
- ಉತ್ಪಾದನೆಯಿಂದ ಬರುವ ಆದಾಯವನ್ನು ಸಂಬಂಧಪಟ್ಟವರಿಗೆ ವಿತರಿಸಲಾಗುತ್ತದೆ.

## ಕಲಿಕಾ ನ್ಯೂನ್ಯತಾ ತರಬೇತಿ ಕೇಂದ್ರ

**ಸೇವೆ** : ಕಲಿಕಾ ನ್ಯೂನ್ಯತೆಯಿಂದ ಹೊರಬರಲು ತರಬೇತಿ.

### ಆವಶ್ಯಕತೆ

ಬಹಳಷ್ಟು ಜಾಣ್ಮೆ ಮತ್ತು ಶಿಕ್ಷಣದ ಅವಕಾಶಗಳ ಹೊರತಾಗಿಯೂ, ಸಾಮಾನ್ಯ ಮಕ್ಕಳ ಚಟುವಟಿಕೆಗಳಿಗೆ ಹೋಲಿಸಿದಾಗ, ಕೆಲವು ಮಕ್ಕಳಲ್ಲಿರುವ ಕಲಿಕಾ ನ್ಯೂನ್ಯತೆಯ ನಿವಾರಣೆಗೆ ತರಬೇತಿ ಬೇಕಾಗುವುದು. ಅಂತಹ ನ್ಯೂನ್ಯತೆಯನ್ನು ಸಣ್ಣ ಪ್ರಾಯದಲ್ಲಿಯೇ ನಿವಾರಣೆ ಮಾಡದಿದ್ದರೆ ಮುಂದಕ್ಕೆ ಅವರು ಅಧ್ಯಯನ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಹಿಂದುಳಿಯುವ ಸಾಧ್ಯತೆ ಹೆಚ್ಚು.



### ಚಟುವಟಿಕೆ

- ಓರ್ವ ಶಿಕ್ಷಣ ತಜ್ಞ ಕಲಿಕಾ ನ್ಯೂನ್ಯತೆಗಳನ್ನು ಕಂಡುಹಿಡಿದು ಆ ಮಕ್ಕಳ ಬಗ್ಗೆ ವೈಯಕ್ತಿಕ ಗಮನಹರಿಸಿ, ಪ್ರಗತಿಯನ್ನು ಪರಿಶೀಲಿಸಿ, ಸುಧಾರಣೆಗಾಗಿ ಪರಿಹಾರೋಪಾಯಗಳನ್ನು ಹೇಳಿಕೊಡುತ್ತಾರೆ.
- ಆ ತಜ್ಞರು ಮಂಗಳೂರಿನ ಸುತ್ತಮುತ್ತದ ಶಾಲೆಗಳಿಗೂ ಭೇಟಿಕೊಟ್ಟು ನ್ಯೂನ್ಯತೆಗಳಿರುವ ಮಕ್ಕಳನ್ನು ಮಾತನಾಡಿಸಿ ನಿವಾರಣೆಯ ಉಪಾಯಗಳನ್ನು ತಿಳಿಸುತ್ತಾರೆ.

## ವೈದ್ಯಕೀಯ ಸಹಾಯಕ ಉಪಕರಣಗಳ ಬ್ಯಾಂಕ್



**ಸೇವೆ** : ಅವಶ್ಯಕತೆ ಇರುವವರಿಗೆ ವೈದ್ಯಕೀಯ ಉಪಕರಣಗಳನ್ನು ಒದಗಿಸುವುದು.

**ಆವಶ್ಯಕತೆ** : ಶಸ್ತ್ರಚಿಕಿತ್ಸೆಯ ನಂತರದ ಶಾರೀರಿಕ ಅಭ್ಯಾಸ ಅಥವಾ ಚಲನ-ವಲನ ಅಭ್ಯಾಸಕ್ಕಾಗಿ ಅವಶ್ಯಕತೆ ಇರುವವರಿಗೆ ಅಥವಾ ಮನೆಯಲ್ಲಿಯೇ ಅಭ್ಯಾಸ ನಡೆಸಬೇಕಾಗಿದ್ದು ತಕ್ಷಣದಲ್ಲಿ ಹೊಸತನ್ನು ಖರೀದಿಸಲು ಅಸಹಾಯಕರಾಗಿರುವ ದಿವ್ಯಾಂಗರಿಗೆ ಸಹಾಯ ಮಾಡುವುದು.

**ಚಟುವಟಿಕೆ** : ಅಲ್ಪ ಪ್ರಮಾಣದ ಠೇವಣಿಯನ್ನು ಪಡೆದು, ಪುನಃ ಹಿಂತಿರುಗಿಸುವ ಶರ್ತದ ಮೇಲೆ; ವಾಕರ್, ಗಾಲಿಕುರ್ಚಿ, ಕ್ರಚಸ್, ಬೆಡ್ ಪಾನ್, ವಾಟರ್‌ಬೆಡ್, ಏರ್ ಬೆಡ್, ಮಂಚ ಇತ್ಯಾದಿಗಳನ್ನು ಪೂರೈಸುವುದು.

# Vocational Training Centre

## Service

A Day Care centre for adult divyang.

## Necessity

To support those divyang above 25 years of age who cannot be accommodated in special schools, as per norms.

## Functions

- Their skills are utilised for preparing carry bags, fancy bags/ flowers, screen printing and so on.
- The unit is getting support from institutions such as corporate offices, temples, marriage parties, medical shops and caterers.
- The surplus of the sale proceeds is passed on to the inmates involved.

---

# Learning Disability Centre

## Service

Academic assistance to take care of learning disability.

## Necessity

Learning disability is the term used to describe the condition of children, who in spite of adequate intelligence and educational opportunities, have difficulties, as compared to normal children with regular training. If such challenges are not attended to at an early age, they lag behind in studies/social activities.

## Functions

- An educator/expert in identifying the learning challenges, attends to such children and reviews the progress on a one-to-one basis and suggests further techniques for improvement.
- The educator also visits various schools in and around Mangaluru to attend to the children suffering from such challenges.

---

# Medical Assistive Devices Bank

## Service

Providing medical devices/equipment to the needy.

## Necessity

Assisting those who require devices/equipment for post surgery exercise/movement or divyang who cannot afford the equipment for their exercises at home.

## Functions

Lending medical devices such as walker, wheel chair, crutches, bed pan, water bed, air bed, cot etc. The item is provided on returnable basis and on nominal refundable deposit.

# ಅದಮ್ಯ ಚೇತನಾ ಹಗಲು ಪಾಲನಾ ಕೇಂದ್ರ

### ಸೇವೆ

ಮಂಗಳೂರು ನಗರದ ಹೊರವಲಯದಲ್ಲಿ ದಿವ್ಯಾಂಗರ ಹಗಲು ಪಾಲನಾ ಕೇಂದ್ರ

### ಚಟುವಟಿಕೆ

ಸೇವಾ ಭಾರತಿಯ ಕೆಲಸ ಕಾರ್ಯಗಳನ್ನು ಮೆಚ್ಚಿ ಬೆಂಗಳೂರಿನಲ್ಲಿರುವ ದೊಡ್ಡಮನೆ ಶ್ರೀ ಉದಯ್ ಉಳ್ಳಾಲ್ ಇವರು ಒದಗಿಸಿದ ಉಳ್ಳಾಲದ ಸುಸಜ್ಜಿತ ಕಟ್ಟಡದಲ್ಲಿ ಮಾರ್ಚ್ 2018ರಲ್ಲಿ ಅದಮ್ಯ ಚೇತನಾ ಪ್ರಾರಂಭವಾಯಿತು. ಚೇತನಾ ಬಾಲ ವಿಕಾಸ ಕೇಂದ್ರದ ಎಲ್ಲಾ ಚಟುವಟಿಕೆಗಳೂ ಈ ಘಟಕದಲ್ಲಿ ನಡೆಯುತ್ತವೆ.




---

# ನವಚೇತನಾ ಸಂವಹನ ವಿಕಾಸ ಕೇಂದ್ರ

### ಸೇವೆ

ಆಟಿಸಂ ಉಳ್ಳ ಮಕ್ಕಳ ಚಿಕಿತ್ಸೆ.

### ಆವಶ್ಯಕತೆ

ಮಕ್ಕಳಲ್ಲಿರುವ ಆಟಿಸಂ ಕೊರತೆಯನ್ನು ಬೇಗ ಪತ್ತೆ ಮಾಡುವುದು ಮತ್ತು ಅದಕ್ಕೆ ಬೇಕಾದ ತರಬೇತಿ ಕೊಟ್ಟು ಅವರನ್ನು ಮುಖ್ಯವಾಹಿನಿಗೆ ತರುವುದು.

### ಚಟುವಟಿಕೆ

- ೧ರಿಂದ ೬ರ ವಯೋಮಾನದ ಮಕ್ಕಳನ್ನು ಪರೀಕ್ಷಿಸಿ ಆಟಿಸಂ ಲಕ್ಷಣಗಳಿರುವುದನ್ನು ಪತ್ತೆ ಮಾಡುವುದು.
- ತಜ್ಞ ಮಾನಸಿಕ ವೈದ್ಯರು, ಬೆಳವಣಿಯ ಹಂತಗಳ ತಜ್ಞರು, ವಾಕ್ ಮತ್ತು ಭಾಷಾ ತಜ್ಞರು, ಫಿಸಿಯೋ ಮತ್ತು ಆಕ್ಯುಪೇಷನ್ ಥೆರಪಿ ತಜ್ಞರುಗಳಿಂದ ತರಬೇತಿ ಮತ್ತು ಸಮೀಕ್ಷೆ.
- ಈ ಚಟುವಟಿಕೆಗಳಲ್ಲಿ ನಿಟ್ಟೆ ಸಂಸ್ಥೆಯ ಶ್ರವಣ ಮತ್ತು ವಾಕ್ ಥೆರಪಿ ವಿಭಾಗದ ಪೂರ್ಣ ಸಹಕಾರ ಕೂಡಾ ಸಿಗುತ್ತಿದೆ.

Navachetana
Communication Development Centre

### ಸಾಧನೆ

- ಘಟಕಕ್ಕೆ ಪ್ರವೇಶ ಪಡೆದ ಮಕ್ಕಳನ್ನು ತರಬೇತಿಯ ಮೂಲಕ ಮುಖ್ಯವಾಹಿನಿಗೆ ತಂದು ಸಾಮಾನ್ಯ ಶಾಲೆಗೆ ಪ್ರವೇಶ ಪಡೆಯುವುದು ಸಾಧ್ಯವಾಗಿದೆ.

# Adamya Chetana Day Care Centre

## Service

New unit for divyang, outside Mangaluru city.

## Functions

Commenced from March 2018 in a fully-equipped building/premises at Ullal. The accommodation has been leased to the Centre by a donor, Shri Doddamane Uday Ullal, Bengaluru, in appreciation of the services of Seva Bharathi. All the activities presently available in CCDC are being extended by this unit.

---

# Navachetana Communication Development Centre

**Service :** Treatment for autism spectrum disorder.

## Necessity

Early detection/treatment for autism spectrum disorder to bring the child into the mainstream.

## Functions

- Early identification of children with autism and intervention in the age group of 1 to 6 years.
- Training by an experienced psychologist, developmental educator, speech & language pathologist and physio & occupational therapist.
- Nitte Institution of Hearing & Speech Therapy, Mangaluru supports the centre.

## Achievement

Kids who have undergone treatment in the centre have been brought to the mainstream and obtained admission in normal schools.



## ತಲಸ್ಸೇಮಿಯ ಸಹಾಯ ಬಳಗ

**ಸೇವೆ** : ತಲಸ್ಸೇಮಿಯ ಕಾಯಿಲೆ ಪೀಡಿತರಿಗೆ ವೈದ್ಯಕೀಯ ಸಹಾಯ.

**ಚಟುವಟಿಕೆ**

- ತಲಸ್ಸೇಮಿಯ ಎಂಬುದು ರಕ್ತಕ್ಕೆ ಸಂಬಂಧಿಸಿದ ಕಾಯಿಲೆ. ಕಾಯಿಲೆ ಪೀಡಿತರನ್ನು ನಿಯಮಿತವಾಗಿ ರಕ್ತ ಬದಲಾವಣೆಗೊಳಪಡಿಸಬೇಕಾಗುತ್ತದೆ ಮತ್ತು ದುಬಾರಿ ಜೀವರಕ್ಷಕ ಔಷಧಿಗಳನ್ನು ಕೊಡಬೇಕಾಗುತ್ತದೆ.
- ರಕ್ತಪೂರಣಕ್ಕಾಗಿ ನಿಯಮಿತವಾಗಿ ರಕ್ತದಾನ ಶಿಬಿರಗಳನ್ನು ಮತ್ತು ಹಗಲು ಪಾಲನಾ ಕೇಂದ್ರಗಳನ್ನು ತೆರೆಯುವ ಮೂಲಕ, ಮರುಪೂರೈಕೆ ಇಲ್ಲದೇ, ರಕ್ತ ಕೊಡಲಾಗುವುದು.
- ಕಳೆದ ಕೆಲವು ವರ್ಷಗಳಿಂದ ಕುವೈಟ್‌ನಲ್ಲಿರುವ ಭಾರತೀಯ ಮಹಿಳಾ ಅಸೋಸಿಯೇಷನ್‌ನ ಉಪಾಧ್ಯಕ್ಷೆ ಡಾ.ತಹಸೀನ್ ಖಾನ್‌ರವರು ಪ್ರಮುಖ ಪ್ರಾಯೋಜಕರ ನೆಲೆಯಲ್ಲಿ ಬೆಂಬಲ ಕೊಡುತ್ತಿದ್ದಾರೆ.



## ರೋಮನ್ ಮತ್ತು ಕ್ಯಾಥರಿನ್ ಲೋಬೋ ದೃಷ್ಟಿಮಾಂದ್ಯ ಮಕ್ಕಳ ವಸತಿಯುತ ಶಾಲೆ

**ಸೇವೆ**

ಜರ್ಮನಿ ಮೂಲದ ಸಮಾಜ ಸೇವಕಿ ಶ್ರೀಮತಿ ಕಾರ್ಮಿನ್ ಬೋಸ್ಲೆ ನೀ ಲೋಬೋರವರು ಲೀಸ್ ಆಧಾರದಲ್ಲಿ ಕೊಟ್ಟಿರುವ ಸುಸಜ್ಜಿತ ಕಟ್ಟಡದಲ್ಲಿ ದೃಷ್ಟಿಮಾಂದ್ಯ ಮಕ್ಕಳಿಗಾಗಿ ವಸತಿಯುತ ಶಾಲೆ.

**ಚಟುವಟಿಕೆ**

- ಪೂರ್ಣ ಅಥವಾ ಆಂಶಿಕ ದೃಷ್ಟಿಮಾಂದ್ಯ ಮಕ್ಕಳಿಗಾಗಿ ರಾಜ್ಯ ಸರ್ಕಾರಿ ಮಾನ್ಯತೆ ಪಡೆದ ಪ್ರಮುಖ ವಿಷಯಗಳಲ್ಲಿ 10ನೇ ತರಗತಿಯ ತನಕ ಸಾಮಾನ್ಯ ಶಿಕ್ಷಣ ಕೊಡುವುದು.
- ಮಾನ್ಯತೆ ಪಡೆದ ಪ್ರಮುಖ ವಿಷಯಗಳು ಮತ್ತು ಬ್ರೈಲ್ ಅಲ್ಲದೇ ಸ್ಕ್ರೀನ್‌ನಲ್ಲಿ ಓದಲು ಸಹಾಯಕವಾಗುವ ಜಾಸ್ ಹಾಗೂ ಎನ್.ವಿ.ಡಿ.ಎ. ಮುಂತಾದ ತಂತ್ರಾಂಶಗಳ ಮೂಲಕ ಕಂಪ್ಯೂಟರ್ ಶಿಕ್ಷಣ ಕೊಡುವುದು.
- ಶಿಕ್ಷಣ, ವಸತಿ ಮತ್ತು ಆಹಾರ ಪೂರ್ಣವಾಗಿ ಉಚಿತ. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ವಸತಿ ಇರುತ್ತದೆ.
- ಪಠ್ಯೇತರ ಚಟುವಟಿಕೆಗಳಾಗಿ ಸಂಗೀತ, ನೃತ್ಯ, ಚಲನ ವಲನ ಆಧಾರಿತ ಚಟುವಟಿಕೆಗಳು, ಕರ ಕುಶಲತೆಯ ಮೂಲಕ ಹೂಗಳು, ಅಗರಬತ್ತಿಗಳು, ಫ್ಯಾನ್ಸಿ ವಸ್ತುಗಳ ತಯಾರಿ.
- ಲೂಯಿಸ್ ಬ್ರೈಲ್ ದಿನ, ಹೆಲನ್ ಕೆಲ್ಲರ್ ದಿನ, ಸ್ವಾತಂತ್ರ್ಯ ದಿನ, ಪ್ರಜಾಪ್ರಭುತ್ವ ದಿನ, ಶಿಕ್ಷಕರ ದಿನ, ಆಟೋಟಗಳು, ನಿಧಿಶೋಧ, ವಾರ್ಷಿಕೋತ್ಸವ, ಪ್ರಭಾತ್ ಫೇರಿ, ಸಾಮೂಹಿಕ ಹುಟ್ಟುಹಬ್ಬ ಆಚರಿಸಲಾಗುತ್ತದೆ.

**ಸಾಧನೆ**

ಈ ತನಕ ಐದು ತಂಡಗಳು ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷೆಗೆ ಕುಳಿತಿವೆ. ಉತ್ತೀರ್ಣ ಹೊಂದಿರುವ ಮಕ್ಕಳು ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ.

## ಆನ್‌ಲೈನ್ ಕಂಪ್ಯೂಟರ್ ಮತ್ತು ಚಲನ–ವಲನ ತರಬೇತಿ ಘಟಕ

**ಸೇವೆ**

ದೃಷ್ಟಿಮಾಂದ್ಯ ಮಕ್ಕಳ ವಸತಿಯುತ ಶಾಲೆಯ ಸಹ ಚಟುವಟಿಕೆ.

**ಚಟುವಟಿಕೆ**

- ದೃಷ್ಟಿ ಮಾಂದ್ಯತೆ ಇರುವ ಪ್ರೌಢರಿಗಾಗಿ ಆಗಾಗ ಆನ್‌ಲೈನ್ ಕಂಪ್ಯೂಟರ್ ತರಗತಿಗಳನ್ನು ನಡೆಸುವುದು
- ಚಲನ-ವಲನ (ಮೊಬಿಲಿಟಿ) ಕ್ಷಮತೆ ಹೆಚ್ಚಿಸಲು ತರಬೇತಿ ಕೊಡುವುದು.



# Thalassaemia Support Group

## Service

Medical assistance to thalassaemia patients.

## Functions

- Thalassaemia is a blood related disease/disorder.
- Such patients require regular blood transmission and expensive drugs for life.
- Regular blood donation camps and Day Care centres were organised to provide free blood,  without replacement.
- Dr Tahsin Khan, the Vice-President, Indian Women's Association, Kuwait is the main sponsor of medicines for the project for the last several years.

---

# Roman and Catherine Lobo Residential School for the Visually Impaired

## Service

A residential school for the visually impaired in a fully furnished premises, leased by Ms Carmine Bosse Nee Lobo, a philanthropist from Germany.

## Functions

- Children with full or partial vision impaired are studying from I to X standard in core subjects of Karnataka State Government syllabus.
- Other than core subjects and Braille, computer training is imparted with the help of screen reading softwares such as JAWS (Job Access With Speech) and NVDA (Non Visual Desktop Access).
- The education and boarding are totally free of cost and separate accommodation for girls & boys is provided.
- Music, dance, orientation and mobility, hand crafting of flowers, fancy items and incense sticks are co-curricular activities.
- The school celebrates Louis Braille Day, Helen Keller Day, Independence Day, Republic Day with Prabhath Pheri, Teachers Day, Sports & Athletic Day, Treasure Hunt, Annual Day and Mass Birthday.

## Achievements

Five batches have come out appearing in SSLC public examination. Successful students with distinction are now pursuing higher studies.

---

# Online Computer and Mobility Training Unit

## Service : A Co-activity of the residential school for visually impaired.

## Functions

- Conducting online training classes on computer skills periodically, for visually impaired adults.
- Training on mobility to visually impaired adults.





# ಆಶಾಜ್ಯೋತಿ

### ಸೇವೆ

ದಿವ್ಯಾಂಗರು ಮತ್ತು ಅವರ ಹೆತ್ತವರ ವೇದಿಕೆ

### ಚಟುವಟಿಕೆ

- ದಿವ್ಯಾಂಗರು ಮತ್ತು ಅವರ ಹೆತ್ತವರನ್ನು ವರ್ಷಕ್ಕೊಮ್ಮೆ ಸೇರಿಸುವುದು. ಇದೇ 'ವಿಶಿಷ್ಟರಿಗಾಗಿ ವಿಶಿಷ್ಟ ಮೇಳ' ಎಂದು ಪ್ರಸಿದ್ಧಿ ಪಡೆದಿದೆ.
- ವರ್ಷಕ್ಕೊಮ್ಮೆ ದಿವ್ಯಾಂಗರ ಪ್ರವಾಸ ಏರ್ಪಡಿಸುವುದು.
- ಸರ್ಕಾರದಿಂದ ಸಿಗುವ ಸೌಲಭ್ಯಗಳು, ದಿವ್ಯಾಂಗ ಮಕ್ಕಳ ವೈಕಲ್ಯಗಳ ಪರೀಕ್ಷೆ ಮತ್ತು ಸಮೀಕ್ಷೆ, ಅಂಗವಿಕಲತೆಯ ಗುರುತು ಚೀಟಿ ಹೊಂದಲು ಸಹಾಯ ಮಾಡುವುದು, ದಿವ್ಯಾಂಗರು ಸ್ವ ಉದ್ಯೋಗ ಹೊಂದಲು ಸಬ್ಸಿಡಿಯುತ ಸಾಲ ಅಥವಾ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನ ವ್ಯವಸ್ಥೆ ಇತ್ಯಾದಿಗಳ ಬಗ್ಗೆ ದಿವ್ಯಾಂಗರು ಮತ್ತು ಅವರ ಹೆತ್ತವರಿಗೆ ಮಾಹಿತಿ ಒದಗಿಸುವುದು.

### ಸಾಧನೆ

17.12.2017ರಂದು ಕೊಲ್ಲೂರು ಮತ್ತು ಉಡುಪಿಗೆ ಪ್ರವಾಸ ಹಾಗೂ 07.01.2018ರಂದು ವಿಶಿಷ್ಟರಿಗಾಗಿ ವಿಶಿಷ್ಟ ಮೇಳದ ಆಯೋಜನೆ ಮಾಡಲಾಗಿತ್ತು.

# ಎಂಡೋಸಲ್ಫಾನ್ ಸಂತ್ರಸ್ಥರ ಹಗಲು ಪಾಲನಾ ಕೇಂದ್ರ

**ಅವಶ್ಯಕತೆ** : ಎಂಡೋಸಲ್ಫಾನ್ ಎಂಬುದು 1980ರ ವೇಳೆಗೆ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ತಾಲೂಕುಗಳಲ್ಲಿ ಗೇರುಬೀಜದ ಗಿಡಗಳಿಗೆ ಸಿಂಪಡಿಸುತ್ತಿದ್ದ ಕ್ರಿಮಿನಾಶಕ. ಈ ಸಿಂಪಡಣೆಯ ಪರಿಣಾಮವಾಗಿ, ಆ ಬಳಿಕ ಆ ಭಾಗಗಳಲ್ಲಿ ತೀವ್ರ ಶಾರೀರಿಕ ಅಥವಾ ಮಾನಸಿಕ ವೈಕಲ್ಯಗಳೊಂದಿಗೆ ಜನಿಸಿದ ಮಕ್ಕಳು 'ಎಂಡೋಸಲ್ಫಾನ್ ಸಂತ್ರಸ್ಥರು' ಎಂದು ಕರೆಯಲ್ಪಟ್ಟರು. ಜನಗಣತಿಯ ಪ್ರಕಾರ ಅಂತಹ ಸಂತ್ರಸ್ಥರ ಸಂಖ್ಯೆ ಸಾವಿರಕ್ಕಿಂತಲೂ ಹೆಚ್ಚು. ಈ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರವು ಎಂಡೋಸಲ್ಫಾನ್ ಸಂತ್ರಸ್ಥರ ಪುನರ್ವಸತಿ ಯೋಜನೆಯ ಅಡಿಯಲ್ಲಿ 2013ರಲ್ಲಿ ಅವರ ಹಗಲು ಪಾಲನಾ ಕೇಂದ್ರಗಳನ್ನು ತೆರೆದು ಶಿಕ್ಷಣ ಮತ್ತು ಚಿಕಿತ್ಸೆ ಕೊಡುವ ಕಾರ್ಯ ಪ್ರಾರಂಭಿಸಿತು. ಸೇವಾಭಾರತಿಯ ಸೇವಾ ಬದ್ಧತೆಯನ್ನು ಪರಿಗಣಿಸಿ, ಸರ್ಕಾರವು ಮಂಗಳೂರಿನಿಂದ 85 ಕಿ.ಮೀ. ದೂರವಿರುವ ಕೊಕ್ಕಡ ಮತ್ತು ಕೊಯಿಲ ಹಗಲು ಪಾಲನಾ ಕೇಂದ್ರಗಳನ್ನು ನಿರ್ವಹಿಸುವ ಹೊಣೆಯನ್ನು ಏಪ್ರಿಲ್ 2017ರಿಂದ ಸೇವಾಭಾರತಿಗೆ ವಹಿಸಿತು.



# Ashajyothi

ಆಶಾ ಜ್ಯೋತಿ
ದಿವ್ಯಾಂಗರು ಮತ್ತು
ಅವರ ಹೆತ್ತವರ ವೇದಿಕೆ

## Service

A forum of divyang and their parents.

## Functions

- Organising a carnival for divyang with their parents in and around Dakshina Kannada district, once a year, which is popularly known as 'Vishishtarigagi Vishishta Mela'.
- A tour exclusively of divyang, once a year.
- Updating the divyang/parents on availing the facilities extended by governments, assessing/reviewing their deficiency periodically, assisting to possess Disability Cards and availing subsidised loan for self-employment or scholarship for education.

## Achievements

A tour to Kollur and Udupi was organised on 17.12.2017 and the Vishishtarigagi Vishishta Mela on 07.01.2018.



# Endosulphan Day Care Centres

## Service

Day Care centres for Endosulphan victims.

## Necessity

Endosulphan, is a pesticide sprayed to cashew plants in 1980s in most of taluks in Dakshina Kannada district. Due to this, the babies born in the area in certain years were stricken by severe physical and mental disabilities and were termed Endosulphan victims. The census revealed that such victims are in thousands. Hence, the Government of Karnataka framed a scheme in 2013 for rehabilitation of those victims by operating Endosulphan Victims Day Care Centres at Kokkada and





### ಚಟುವಟಿಕೆ

- ಕೇಂದ್ರದ ಫಲಾನುಭವಿಗಳನ್ನು ಅವರವರ ಮನೆಗಳಿಂದ ವಾಹನಗಳಲ್ಲಿ ಕೇಂದ್ರಕ್ಕೆ ಕರೆತರುವುದು ಮತ್ತು ಮತ್ತು ಸಂಜೆ ಮರಳಿ ಮನೆಗಳಿಗೆ ಬಿಡುವುದು.
- ನಿಗದಿತ ಅವಧಿಯಲ್ಲಿ ಅವರಿಗೆ ಉಪಾಹಾರ, ಊಟ ಮತ್ತು ಪೌಷ್ಠಿಕ ಆಹಾರ ಒದಗಿಸುವುದು.
- ಆವಶ್ಯಕತೆ ಇರುವವರಿಗೆ ಫಿಸಿಯೋಥೆರಪಿ ಮತ್ತು ಸ್ಪೀಚ್ ಥೆರಪಿ ಕೊಡುವುದು.
- ಪಾಲನಾ ಸಮಿತಿಯ ಮತ್ತು ಹೆತ್ತವರ ಸಭೆಯನ್ನು ಕರೆದು ಮಾಹಿತಿಯನ್ನು ಪಡೆಯುವುದು, ಅದರ ಸಮೀಕ್ಷೆ ಮಾಡುವುದು. ತಿಂಗಳಿಗೊಂದರಂತೆ ವೈದ್ಯಕೀಯ ತಪಾಸಣಾ ಶಿಬಿರ ನಡೆಸುವುದು.
- ಅವರ ಪ್ರತಿಭೆ ವಿಕಸಿಸಿ ಮತ್ತು ಸ್ವಾವಲಂಬಿಯನ್ನಾಗಿ ಮಾಡಲು ಚಟುವಟಿಕೆ ರೂಪಿಸುವುದು.

### ಸಾಧನೆ

- ಕೇಂದ್ರಗಳನ್ನು ವಹಿಸಿಕೊಂಡ ಮೊದಲ ವರ್ಷವೇ, ಇಬ್ಬರು ಫಲಾನುಭವಿಗಳು 10ನೇ ತರಗತಿಯ ಪರೀಕ್ಷೆಗೆ ಹಾಜರಾಗಿ ಉತ್ತೀರ್ಣರಾಗಿರುವುದು ಎಂಡೋಸಲ್ಫಾನ್ ಸಂತ್ರಸ್ಥರ ಸೇವೆಯಲ್ಲಿ ಒಂದು ಮೈಲಿಗಲ್ಲು.
- ವಾರ್ಷಿಕೋತ್ಸವ ಮತ್ತು ಸಾಮೂಹಿಕ ಹುಟ್ಟು ಹಬ್ಬ ಆಚರಣೆಯನ್ನು ಕೇಂದ್ರಗಳಲ್ಲಿ ಮೊದಲ ಬಾರಿಗೆ ಆಚರಿಸಲಾಯಿತು..
- ಕೇಂದ್ರದಲ್ಲಿ ಅವರ ದಿನನಿತ್ಯದ ಚಟುವಟಿಕೆಗಳಲ್ಲಿ 'ಗಳಿಕೆ ಮತ್ತು ಕಲಿಕೆ' ಕಾರ್ಯಗತಗೊಳಿಸಲಾಯಿತು.
- ಮಂಗಳೂರಿನ ಕುದ್ರೋಳಿ ದೇವಸ್ಥಾನ ಮತ್ತು ತಣ್ಣೀರು ಬಾವಿ ಟ್ರೀ ಪಾರ್ಕ್‌ಗೆ ಸಂತ್ರಸ್ಥರ ಪ್ರವಾಸ ಏರ್ಪಡಿಸಲಾಯಿತು. ಜೀವನದಲ್ಲಿ ಮೊದಲ ಬಾರಿಗೆ ಕೇಂದ್ರದ ಸಂತ್ರಸ್ಥರು ತಮ್ಮ ಮನೆ ಅಥವಾ ಗ್ರಾಮದಿಂದ ಹೊರಗೆ ಬಂದು ಸಮುದ್ರ ದಡದಲ್ಲಿ ಸಂಭ್ರಮಿಸಿದುದು ಅವರ ಪಾಲಿಗೆ ಸ್ಮರಣೀಯ ದಿನ.

---

## ಆಸರೆ

**ಸೇವೆ** : ಹಿರಿಯ ನಾಗರಿಕರ ಕ್ಷೇಮಪಾಲನಾ ಕೇಂದ್ರ

### ಚಟುವಟಿಕೆ

- ಇದು ಹಿರಿಯ ನಾಗರಿಕರ ಆರೋಗ್ಯ, ಸಂವಾದ ಕೇಂದ್ರ. ದೈಹಿಕ ಚಟುವಟಿಕೆಗಳ ಅಭ್ಯಾಸಕ್ಕಾಗಿ ಬೇಕಾಗುವ ಉಪಕರಣಗಳು ಮತ್ತು ಓದು, ಅಧ್ಯಯನಕ್ಕಾಗಿ ಪುಸ್ತಕಾಲಯದ ವ್ಯವಸ್ಥೆ ಇರುತ್ತದೆ. ಆಸರೆಯ ಫಲಾನುಭವಿಗಳು ಚೇತನಾ ಶಾಲೆಯ ಮಕ್ಕಳೊಂದಿಗೆ ಮಾತನಾಡುವ, ಬೆರೆಯುವ, ಅವರಿಗೆ ಚಿಕ್ಕಪುಟ್ಟ ಕೆಲಸಗಳಲ್ಲಿ ಸಹಾಯ ಮಾಡುವ ಅವಕಾಶ ಇರುತ್ತದೆ.
- ಪ್ರತಿ ಶನಿವಾರ ಯೋಗ ತರಗತಿ ನಡೆಸಲಾಗುತ್ತದೆ. ಹಿರಿಯ ನಾಗರಿಕರ ಪರಿಷತ್ತು ಮಂಗಳೂರು ಇದರ ವತಿಯಿಂದ ಆಗಾಗ ಸಂವಾದ ಕಾರ್ಯಕ್ರಮ ನಡೆಯುತ್ತದೆ.
- ಚೇತನಾ ಶಾಲೆ ಮತ್ತು ಪಾಂಡೇಶ್ವರದಲ್ಲಿ, ತಿಂಗಳಿಗೊಮ್ಮೆ ತಜ್ಞ ವೈದ್ಯರಿಂದ ಹಿರಿಯ ನಾಗರಿಕರ ಆರೋಗ್ಯ ತಪಾಸಣಾ ಶಿಬಿರ ನಿಯಮಿತವಾಗಿ ನಡೆಯುತ್ತದೆ.



---

## ಧನ್ವಂತರಿ

**ಸೇವೆ** : ವೈದ್ಯಕೀಯ ಶಿಬಿರಗಳನ್ನು ನಡೆಸುವುದು.

### ಚಟುವಟಿಕೆ

- 24.09.1992ರಲ್ಲಿ ಮಂಗಳೂರಿನ ಕೋಡಿಕಲ್‌ನಲ್ಲಿ ಆರಂಭವಾದ, "ರವಿವಾರದ ಸಾಪ್ತಾಹಿಕ ಉಚಿತ ವೈದ್ಯಕೀಯ ತಪಾಸಣಾ ಶಿಬಿರ" ಈಗಲೂ ನಿರಂತರವಾಗಿ ನಡೆಯುತ್ತಿದೆ.

Koila, situated 85 km. away from Mangaluru. In appreciation of the services of Seva Bharathi in the field, the government entrusted the management of such centres to Seva Bharathi in April 2017.

### Functions

- Bringing the inmates daily to the centres, from their respective residences, in hired vehicles.
- Providing nutritious breakfast, lunch and snacks at periodical intervals.
- Providing required physio and speech therapy to the needy.
- Conducting periodic meetings of 'Palana Samithi' and parents' meetings for getting feedback and review of the same.
- Organising periodic medical check-up camps.
- Motivation to improve their ability for self help.
- Dropping the inmates back to their residences, in the evening.

### Achievements

- In the first year of the takeover, two inmates appeared for the SSLC examination and passed, which is a remarkable achievement in Endosulphan victims' service.
- Conducting Annual Day and mass birthday for the first time.
- 'Earning and Learning' initiated in their activities.
- A tour for Endosulphan victims was organised to Kudroli temple Mangaluru and Tannirbavi Tree Park. It was a memorable day for them, as for the first time in their lives, they were taken outside their home/village. They enjoyed being at the beach.

---

## Aaasare

### Service

Senior citizens' care.

### Functions

- It is a day care centre for senior citizens. Physio equipments and a library are made available for their use. They also mingle with Chetana children, entertain them and get entertained themselves.
- Every Saturday yoga classes are conducted and frequent talks are arranged by Senior Citizen Council, Mangaluru.
- Regular Medical check-up camps were conducted at Chetana premises and Pandeshwar centre once a month, by eminent physicians.

---

## Dhanvantari

### Service : Conducting medical check-up camps.

### Functions

- A camp known as 'Sunday Medical Check up Camp' started at Kodical, within Mangaluru city limit, on Sunday, 24.09.1992, providing medical check-up and medicines free of cost. The camp is being held till date without break regularly.

- ಮಂಗಳೂರಿನ ನಾಲ್ಕು ಪ್ರಸಿದ್ಧ ಆಸ್ಪತ್ರೆಗಳ ಸಹಯೋಗದಲ್ಲಿ ವೈದ್ಯಕೀಯದ ಎಲ್ಲಾ ವಿಭಾಗದಲ್ಲಿಯೂ ವಿಶೇಷ ವೈದ್ಯಕೀಯ ಶಿಬಿರಗಳನ್ನು ನಡೆಸಿ, ಉಚಿತವಾಗಿ ಔಷಧಿಗಳನ್ನು ಮತ್ತು ವೈದ್ಯರ ಸ್ಪಷ್ಟ ಶಿಫಾರಸ್ಸು ಇದ್ದಲ್ಲಿ ಕನ್ನಡಕವನ್ನೂ ವಿತರಿಸಲಾಗುತ್ತದೆ.
- ಶಿಬಿರಗಳನ್ನು ನಡೆಸುವ ತನ್ನ ಅನುಭವವನ್ನು ಇತರ ಸ್ವಯಂಸೇವಾ ಸಂಘಟನೆಗಳೊಂದಿಗೆ ಹಂಚಿಕೊಂಡು ಜಂಟಿಯಾಗಿ ವೈದ್ಯಕೀಯ ಶಿಬಿರಗಳನ್ನು ನಡೆಸುತ್ತಿದೆ.

### ಸಾಧನೆ

'ರವಿವಾರದ ಸಾಪ್ತಾಹಿಕ ಉಚಿತ ವೈದ್ಯಕೀಯ ತಪಾಸಣಾ ಶಿಬಿರ'ವು 24.09.2017ರಂದು ತನ್ನ ಬೆಳ್ಳಿ ಹಬ್ಬದ ನೆನಪಿಗಾಗಿ ವಿಶೇಷ ಶಿಬಿರವನ್ನು ಏರ್ಪಡಿಸಿತು. ಶಿಬಿರದಲ್ಲಿ 327 ಫಲಾನುಭವಿಗಳು ಪ್ರಯೋಜನ ಪಡೆದರು. 150 ಜನರಿಗೆ ಉಚಿತವಾಗಿ ಕನ್ನಡಕ ಒದಗಿಸಲಾಯಿತು. ಶಿಬಿರವು ಅನವರತವಾಗಿ ಸಾಗಿಬರುವಲ್ಲಿ ಸಹಕರಿಸಿದ ವೈದ್ಯರನ್ನು ಮತ್ತು ಕಾರ್ಯಕರ್ತರನ್ನು ಅವರ ನಿಸ್ವಾರ್ಥ ಸೇವೆಗಾಗಿ ಸಮಾರಂಭವೊಂದರಲ್ಲಿ ಸನ್ಮಾನಿಸಲಾಯಿತು.

## ರಕ್ತದಾನ



**ಸೇವೆ** : ರಕ್ತದಾನ ಶಿಬಿರಗಳನ್ನು ನಡೆಸಿ ರಕ್ತನಿಧಿಯ ಮೂಲಕ ಅವಶ್ಯಕತೆಯಿರುವವರಿಗೆ ರಕ್ತ ಒದಗಿಸುವುದು.

### ಚಟುವಟಿಕೆ

- ಸೇವಾಭಾರತಿಯ ಉಗಮ ರಕ್ತದಾನ ನಡೆಸುವುದರ ಮೂಲಕವೇ ಆಯಿತು..
- ಸೇವಾ ಸಂಸ್ಥೆಗಳ ಸಹಕಾರದಿಂದ ರಕ್ತದಾನ ಶಿಬಿರಗಳನ್ನು ಏರ್ಪಡಿಸಿ, ಸಂಗ್ರಹಿಸಿದ ರಕ್ತವನ್ನು ಕಸ್ತುರ್ಬಾ ಮೆಡಿಕಲ್ ಕಾಲೇಜ್, ಮಂಗಳೂರು ಮತ್ತು ಸರ್ಕಾರಿ ವೆನ್ಲಾಕ್ ಆಸ್ಪತ್ರೆ, ಮಂಗಳೂರು ಇಲ್ಲಿಯ ರಕ್ತನಿಧಿಯ ಮೂಲಕ ಅವಶ್ಯಕತೆ ಇರುವವರಿಗೆ ಒದಗಿಸುವುದು.
- ಶಿಬಿರಗಳನ್ನು ನಡೆಸುವಲ್ಲಿ ಕೆ.ಎಂ.ಸಿ., ಮಂಗಳೂರು, ಸರ್ಕಾರಿ ವೆನ್ಲಾಕ್ ಆಸ್ಪತ್ರೆ, ಮಂಗಳೂರು, ಲೇಡಿಗೋಷನ್ ಆಸ್ಪತ್ರೆ, ಮಂಗಳೂರು/ರೆಡ್ ಕ್ರಾಸ್ ಸೊಸೈಟಿ, ಮಂಗಳೂರು ಮತ್ತು ಎ.ಜೆ. ಆಸ್ಪತ್ರೆ, ಮಂಗಳೂರು ಇವರೆಲ್ಲರ ಸಹಕಾರ ಸ್ಮರಣೀಯ.
- 180ನೆಯ ಶಿಬಿರ 25. 02. 2018ರಂದು ಕುಳೂರಿನಲ್ಲಿ ನಡೆಯಿತು.

## ಸಮುದಾಯ ಸೇವೆಗಳು

### ಚಟುವಟಿಕೆ

- ಮಂಗಳೂರು ಮಹಾನಗರ ಪಾಲಿಕೆ ಮತ್ತು ಮಣ್ಣಗುಡ್ಡೆಯ ಗಾಂಧೀ ಪಾರ್ಕ್ ಟ್ರಸ್ಟ್ ಇವರ ಸಹಯೋಗದೊಂದಿಗೆ ಗಾಂಧೀ ಪಾರ್ಕ್‌ಗೆ ತಾಗಿಕೊಂಡು ದಿವ್ಯಾಂಗರಿಗಾಗಿಯೇ ಉದ್ಯಾನ ನಿರ್ಮಿಸಿರುವುದು.
- ಸಾರಸ್ವತ್ ಸೇವಾ ಸಮಿತಿ ಮಂಗಳೂರು ಇವರು ಮಂಗಳೂರಿನಿಂದ 8ಕಿ.ಮೀ ದೂರದ ಉಳ್ಳಾಲದಲ್ಲಿ ಕಟ್ಟಡ ಸಹಿತ ಸ್ಥಳಾವಕಾಶವಿರುವ 'ಸಾರಸ್ವತ ಆಶ್ರಮ'ವನ್ನು ಸಮುದಾಯ ಸೇವೆಗಳನ್ನು ನಡೆಸಲು ಸೇವಾಭಾರತಿಗೆ ಕೊಟ್ಟಿರುತ್ತಾರೆ.
- ಈ ಆಶ್ರಮದಲ್ಲಿ ಮಹಿಳೆಯರಿಗೆ ಮತ್ತು ಗಂಡಸರಿಗೆ ಯೋಗ ತರಗತಿಗಳು, ಸಾಪ್ತಾಹಿಕ ವೈದ್ಯಕೀಯ ತಪಾಸಣಾ ಶಿಬಿರ, ಹೊಲಿಗೆ ತರಬೇತಿ, ಸ್ವಸಹಾಯ ಗುಂಪು, ವಾರಕ್ಕೊಮ್ಮೆ ಭಜನೆ, ಹಿರಿಯ ನಾಗರಿಕರ ಸಭೆ, ಸ್ಥಳೀಯ ಹಬ್ಬ, ವಿಶೇಷವಾಗಿ ಕೃಷಿಗೆ ಸಂಬಂಧಪಟ್ಟ ಸಮುದಾಯಗಳ ಜಾನಪದ ಕಲೆ ಮತ್ತು ಹಬ್ಬಗಳ ಪುನರುತ್ಥಾನಕ್ಕೆ ಇಲ್ಲಿ ಅವಕಾಶ ಕಲ್ಪಿಸಲಾಗುತ್ತದೆ.
- ತರಕಾರಿ ಬೀಜಗಳ ವಿತರಣೆ, ಪಪ್ಪಾಯಿ ಮತ್ತು ತೆಂಗಿನ ಗಿಡಗಳ ವಿತರಣೆ, ಕಿಚನ್ ಗಾರ್ಡನ್ ಕೂಡಾ ನಡೆಯುತ್ತಿದೆ.

## ಆದಾಯದ ಮೂಲ

ಸೇವಾಭಾರತಿಯ ಮೇಲೆ ತಿಳಿಸಿದ ಎಲ್ಲಾ ಸೇವಾಕಾರ್ಯಗಳು ಸಾರ್ವಜನಿಕರು ಮತ್ತು ಕಾರ್ಪೋರೇಟ್ ಉದ್ದಿಮೆಗಳ ದೇಣಿಗೆ/ಪ್ರಾಯೋಜಕತ್ವದಲ್ಲಿ ನಡೆಯುತ್ತವೆ. ಸೇವಾಭಾರತಿಗೆ ಕೊಡುವ ದೇಣಿಗೆಯು ಆದಾಯ ತೆರಿಗೆಯ 80ಜಿಯ ಅಧೀನ ತೆರಿಗೆ ರಿಯಾಯಿತಿ ಪಡೆಯಲು ಅರ್ಹವಾಗಿರುತ್ತದೆ.

- Dhanvantari also organises special medical camps in rural areas in all disciplines of medicine, in association with 4 hospitals at Mangaluru and distributes medicines and spectacles on specific prescription.
- To share its experience in the field, Dhanvantari supports other voluntary organisations in conducting medical camps.

Achievements : Sunday medical check up camp completed 25 years as on 24.09.2017. To commemorate the day, a special camp was held benefitting 327 citizens, with 150 spectacles distributed free of cost. A dozen specialists and similar number of volunteers were felicitated for their yeoman services.

# Blood Donation

## Functions

- This was the initial activity of Seva Bharathi, which motivated our team to come out to serve the society.
- Collection of blood units by organising blood donation camps, many times in association with voluntary organisations, and depositing the same at Blood Banks of Kasturba Medical College (KMC) Mangaluru and Govt. Wenlock Hospital, Mangaluru, to further distribute to the needy.
- The co-operation extended by KMC Mangaluru, Govt. Wenlock Hospital, Mangaluru, Red Cross Society/Lady Goshen Hospital Mangaluru, AJ Hospital Mangaluru is noteworthy in this regard.
- 180th camp was held at Kulur on 25.02.2018.

# Community Services

## Functions

- A park was designed and established at Gandhinagar (Mannagudda) Mangaluru through Gandhi Park Trust and Mangaluru City Corporation. It is adjacent to Gandhi Park , made exclusively for divyang.
- The Saraswath Seva Samithi, Mangaluru has provided "Saraswath Ashram' a spacious premises at Ullal, 8 Km from the city, for community services.
- Yoga classes for ladies and gents, weekly medical check-up camps, stitching & training classes, support to self-help group, weekly bhajan, gathering of senior citizens are some of the projects.
- A resurgence of local festivals and folk games especially of the agricultural community, is being considered.
- Kitchen gardening, distribution of vegetable seeds, papaya and coconut saplings are done.

# Sources of Funding

Donations from the public and corporate bodies are the main source of income for Seva Bharathi or its units. Donations made to Seva Bharathi are entitled to tax concessions under Section 80 G of Income Tax Act 1961.

# Registration Details

| Subject | Ref. No. |
| --- | --- |
| Seva Bharathi ( R) is registered under Trust Act | No.119 dated 15.01.1993 |
| Registered as per section 12A with the Commissioner of Income Tax, Karnataka III, Bangaluru. | No. ACCTC/718/10A/BII/S.462/92/CIT III dated 08.02.1993. |
| Seva Bharathi is also registered at Ministry of Home Affairs, Government of India | No. 094630144 dated 7.8.2016) under the Foreign Contribution Regulation Act |
| Donations made to Seva Bharathi are entitled for tax concessions | under Sec.80G of the Income Tax Act 1961, presently valid from 14.09.2010 and onwards. |
| Seva Bharathi Permanent Account Number | AAATS5315G/15/1/1993 |
| Chetana Child Development Centre is registered under section 12 of the National Trust Act 1999 since 2003. | Regn. No.1/12/NAT/0234/KAR/2008RR dated 20.06.2008 and Regn. No. KCHE16514846887, New Delhi, dated 29/3.2017, |
| Chetana Child Development Centre is also registered at Karnataka State government under section 51.52 of persons with Disabilities (Equal Opportunities, Protection of Rights and Full Participation) Act, 1995 | Sl.No. 11/2005-06 |
| Chetana Child Development Centre is recognized by the Department of Disabled Welfare, Government of Karnataka, Bangalore | No. NAKE/34/Permission/2000-01/2478 dated 19.07.2001 |
| Change of registered names of two units of Seva Bharathi (R) (1) from Chetana Society for Disabled children to Chetana Child Development Centre (Day care centre for Specially Abled) and (2) from Roman and Catherine Lobo School for the Blind to Roman and Catherine Lobo Residential School for Visually impaired. | No. DSCE/EMY/SBT/Add/36/2018-19, Dated 30.6.2018 of Director, Dept. of Disabled and Senior Citizen Empowerment, Bangaluru and No. DDWM/ VRW_MRW/ID/18-19 Dated 6.7.2018 of District Welfare Officer for Disabled, Dept.of Disabled and Senior Citizen Empowerment Mangaluru. |
| Roman & Catherine Lobo Residential School for Visually Impaired is recognized by Government of Karnataka, Bangalore | No. NAKE/VS/Permission/ 09-10/2011-12/3309 dated 13.12.2011 |

## Progress of Seva Bharathi over the years - A glance

| | Estd. | Unit Name | Reach area | Beneficiaries in 2018 |
|---|---|---|---|---|
| 1 | 1991 | Dhanvantri (Blood Bank) | D K District | 07 camps/ 471 blood units |
| 2 | 1992 | Dhanvantari (Medical camps) | Mangaluru city | 41 camps / 1082 citizens |
| 3 | 1993 | Chetana Child Development Centre (Ph: 7892724718) | Mangaluru city | 100 Children / 24 Staff |
| 4 | 1998 | Physio Unit | D K District | 35 Children / 6 Staff |
| 5 | 1998 | Asha Jyothi | D K District | 1470 |
| 6 | 2000 | Vocational Training Centre | Mangaluru city | 16 |
| 7 | 2002 | Medical Devices Assistive Bank | D K District | 76 |
| 8 | 2005 | Learning Disability Centre | Mangaluru city | 12 |
| 9 | 2005 | Thalassaemia Group | D K District | 150 |
| 10 | 2006 | Mobile Neuro Sensory Development Unit | D K District | 74 |
| 11 | 2009 | Roman and Catherine Lobo Residential School for visually impaired (Ph: 9945421892) | Karnataka State | 29 Students / 10 Staff |
| 12 | 2010 | Aaasare | Mangaluru city | 18 |
| 13 | 2011 | Mobility Training for visually impaired | Mangaluru city | 09 |
| 14 | 2013 | Community Services | D K District | NA |
| 15 | 2015 | Navachetana Communication Development Centre | Mangaluru city | 17 Kids / 4 Staff |
| 16 | 2016 | Community Services (Sevashram) | Mangaluru & Ullal city | NA |
| 17 | 2017 | Endosulphan Day Care Centres | D K District | 82 Inmates / 14 Staff |
| 18 | 2018 | Adamya Chetana | Ullal Taluk | 16 Children / 4 Staff |

# Abridged Financial Statement as at 31-03-2017

| | Seva Bharathi | Chetana | RCLSB | Nava chetana | Asha Jyothi | Total |
|---|---|---|---|---|---|---|
| **Income (amount in Rs.)** | | | | | | |
| Donation | 5573517 | 725020 | 976280 | | 317698 | 7592515 |
| Foreign Contribution | 1962594 | | | | | 1962594 |
| Bank Interest | 519025 | 21476 | 48893 | 1834 | 11283 | 602511 |
| Development Fees / Fees | | 37500 | | | | 37500 |
| Grant Received | | 410334 | 558965 | | | 969299 |
| Other Recipts | 77047 | 142237 | 13140 | 358301 | 6600 | 597325 |
| Vtc Surplus | | 301106 | | | | 301106 |
| **Total** | **8132183** | **1637673** | **1597278** | **360135** | **335581** | **12062850** |
| **Expenditure** | | | | | | |
| Bank Charges | 4230 | 123 | 295 | | | 4648 |
| Electricity | | 75647 | 104951 | | | 180598 |
| Endosulfan Project | 96074 | | | | | 96074 |
| Functions / Celebrations | 62868 | 120687 | 37196 | 650 | 261758 | 483159 |
| Hearing Disability Pr. | 31000 | | | | | 31000 |
| Honararium | 24000 | 18050 | 235200 | | | 277250 |
| Medical Camp / Expenses | 88375 | 995 | 2288 | | | 91658 |
| Mess / Food Charges | | 21702 | 246877 | | | 268579 |
| Miscellaneous Exp. | 6590 | 29381 | 9675 | 4050 | 10813 | 60509 |
| Mobile Neuro Sensory | 193631 | | | | | 193631 |
| Postage | 17474 | 7592 | 6163 | | 11303 | 42532 |
| Printing / Stationery | 33697 | 15396 | 5134 | 1903 | 53267 | 109397 |
| Lease Rent / Rent | 5000 | | 1100 | | | 6100 |
| Van / Bldg./ Comp. Repairs | 85435 | 647570 | 86209 | 16320 | | 835534 |
| Salary | 405465 | 2562784 | 952323 | 266927 | | 4187499 |
| Staff Welfare / Epf | 252091 | 383809 | 98917 | | | 734817 |
| Teaching Materials | 34000 | 10321 | 11538 | 2495 | | 58354 |
| Telephone Expenses | 7282 | 3026 | 11914 | | | 22222 |
| Thalassemia Patients | 977160 | | | | | 977160 |
| Training Expenses | | | 70840 | | | 70840 |
| Travelling Expenses | 3556 | 19881 | 6764 | | | 30201 |
| Uniform | | 44405 | 45310 | | | 89715 |
| Web Creation | 18554 | | | | | 18554 |
| **Total** | **2346482** | **3961369** | **1932694** | **292345** | **337141** | **8870031** |
| Capital Expenditure | 458817 | 109810 | | | | 568627 |
| Depreciation | 757978 | 19740 | 43656 | | | 821374 |
| **Final Total** | **3563277** | **4090919** | **1976350** | **292345** | **337141** | **10260032** |

# Abridged Financial Statement as at 31-03-2018

| | Seva Bharathi | Chetana | RCLSB | Nava chetana | Asha Jyothi | Endosufan | Total |
|---|---|---|---|---|---|---|---|
| **Income (amount in Rs.)** | | | | | | | |
| Donation | 5185439 | 483217 | 530530 | | 314526 | 56799 | 6570511 |
| Foreign Contribution | 4219122 | | | | | | 4219122 |
| Bank Interest | 493986 | 34225 | 68679 | 3243 | 11402 | 7165 | 618700 |
| Development Fees/Fees | | 53000 | | | | | 53000 |
| Endowment Funds | 1800000 | | | | | | 1800000 |
| Grant Received | | 3510160 | | | | 3327264 | 6837424 |
| Other Recipts | 119100 | 153734 | 16672 | 347815 | 14660 | 1978 | 653959 |
| Vtc Surplus | | 98350 | | | | | 98350 |
| **Final Total** | **11817647** | **4332686** | **615881** | **351058** | **340588** | **3393206** | **20851066** |
| **Expenditure** | | | | | | | |
| Bank Charges | 7581 | 823 | 686 | | | 1762 | 10852 |
| Charity & Donation | 50000 | | | | | | 50000 |
| Electricity | 1760 | 82626 | 84818 | | | 19173 | 188377 |
| Functions/Celebrations | 61566 | 303592 | 25531 | | 285240 | 138839 | 814768 |
| Honararium | 26400 | 29600 | 105000 | | | 84063 | 245063 |
| Lady Goshen Hospital | 1712049 | | | | | | 1712049 |
| Medical Camp / Expenses | 173938 | 845 | 1221 | 368 | | 89357 | 265729 |
| Mess / Food Exp | | 46248 | 200865 | | | 654320 | 901433 |
| Miscellaneous Exp. | 7068 | 3245 | 1410 | | 755 | 6288 | 18766 |
| Mobile Neuro Sensory | 105085 | | | | | | 105085 |
| News Paper/Periodical | | | 1347 | | | 2862 | 4209 |
| Postage | 7637 | 9548 | 721 | 640 | 6981 | 168 | 25695 |
| Printing / Stationery | 21166 | 11811 | 6990 | 1138 | 2648 | 15913 | 59666 |
| Project Expenses | 294915 | | | | | | 294915 |
| Van/Bldg./Comp. Repairs | 160907 | 697204 | 61496 | 11875 | | 81974 | 1013456 |
| Lease Rent / Rent | 35000 | | 1100 | | | | 36100 |
| Salary | 209822 | 3655523 | 1122739 | 432682 | | 1651510 | 7072276 |
| Staff Welfare / Epf | 200000 | 666325 | 403406 | | | 290908 | 1560639 |
| Teaching Materials | | 6394 | 13791 | 125 | | 1726 | 22036 |
| Telephone Expenses | 7283 | 4343 | 11417 | | | 2715 | 25758 |
| Thalassemia Patients | 1180413 | | | | | | 1180413 |
| Training Expenses | | | 72210 | | | | 72210 |
| Travelling Expenses | 3854 | 16902 | 3504 | | | 1557027 | 1581287 |
| Uniform | | 9480 | 14668 | | | | 24148 |
| **Total** | **4266444** | **5544509** | **2132920** | **446828** | **295624** | **4598605** | **17284930** |
| Capital Expenditure | 511907 | 50000 | 16950 | | | 217440 | 796297 |
| Depreciation | 736306 | 26006 | 40359 | | | 28935 | 831606 |
| **Final Total** | **5514657** | **5620515** | **2190229** | **446828** | **295624** | **4844980** | **18912833** |




**Seva Bharathi (R),** Mangalore

Balamaruthi Vyayama Mandala, Vithoba Temple Road,
Dakshina Kannada District, Mangaluru - 575001 - Karnataka (India)
Ph: 9036493397 / 9880543918 / 7760905604
Email: Chetanabharathi@gmail.com /chetanabharathi@rediffmail.com/ rclsb@rediffmail.com
www.chetanasociety.in